ಹಣ ಕುತೂಹಲ

ಎಂ.ಎಸ್. ಶ್ರೀರಾಮ್



# ವಿತ್ತ ಮಂತ್ರಿಗಳ ರಾಜೀನಾಮೆಗಳು

ಭಾರತದ ಸಮಕಾಲೀನ ಚರಿತ್ರೆಯನ್ನು ಭಿನ್ನ ರೀತಿಯಿಂದ ನೋಡುವ ಹಲವು ಪ್ರಯತ್ನಗಳು ಕಳೆದೆರಡು ದಶಕಗಳಲ್ಲಿ ವಿಪುಲವಾಗಿ ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ 'ಇಂಡಿಯಾಸ್ ಫೈನಾನ್ಸ್ ಮಿನಿಸ್ಟರ್ಸ್ – ಫ್ರಮ್ ಇಂಡಿಪೆಂಡೆಂಸ್ ಟು ಎಮರ್ಜೆನ್ಸಿ ಪುಸ್ತಕವು ಗಮನ ಸೆಳೆಯುವಂತಿದೆ.

ಸಾಮಾನ್ಯವಾಗಿ ಚರಿತ್ರೆಯನ್ನು ರಾಜಕೀಯದ ದೃಷ್ಟಿಯಿಂದ ನಾವು ಅರ್ಥಮಾಡಿಕೊಳ್ಳುತ್ತೇವೆ. ಆಳಿದವರು ಯಾರು? ಅವರ ಶೈಲಿ ಹೇಗಿತ್ತು? ಯಾರನ್ನು ಸೆದೆಬಡಿದು ಅಧಿಕಾರಕ್ಕೆ ಬಂದರು? ಅವರ ವಿಚಾರಧಾರೆ ಯಾವ ಕಡೆಗೆ ವಾಲುತ್ತಿತ್ತು? ಹೀಗೆ ನಮ್ಮ ಚರಿತ್ರೆಯ ಪರಿಭಾಷೆಗೆ ರಾಜಕೀಯ ಶಾಸ್ತ್ರದ ರಂಗು ಬರುವುದರಲ್ಲಿ ಆಶ್ಚರ್ಯವಾಗಬಾರದು. ಏಕೆಂದರೆ ಅಧಿಕಾರವಿರುವವರೇ ಸಮಕಾಲೀನವನ್ನೂ ಚರಿತ್ರೆಯ ವಾತಾವರಣವನ್ನೂ ಸೃಷ್ಟಿಸುತ್ತಾರೆ. ಆದರೆ ಭಾರತದ ಸಮಕಾಲೀನ ಚರಿತ್ರೆಯನ್ನು ಭಿನ್ನ ರೀತಿಯಿಂದ ನೋಡುವ ಹಲವು ಪ್ರಯತ್ನಗಳನ್ನು ಚಿಂತಕರು ಈಚೆಗೆ ಕೈಗೊಳ್ಳುತ್ತಿರುವುದು ಆಸಕ್ತಿಯ ವಿಷಯ. ಕಳೆದೆರಡು ದಶಕಗಳಲ್ಲಿ ಬಂದಿರುವ ಪುಸ್ತಕಗಳನ್ನು ಗಮನಿಸಿದರೆ, ಅವುಗಳ ವಿಪುಲತೆ ಮತ್ತು ವೈವಿಧ್ಯ ನಮ್ಮ ಗಮನವನ್ನು ಖಂಡಿತವಾಗಿಯೂ ಸೆಳೆಯುತ್ತದೆ. ಈ ರೀತಿಯ ಪುಸ್ತಕಗಳಲ್ಲಿ ಚರಿತ್ರೆಯ ಪುನರವಲೋಕನ ಮತ್ತು ವ್ಯಾಖ್ಯಾನ, ಅನುಭವ ಕಥನ, ವ್ಯಕ್ತಿಚಿತ್ರಣ ಮತ್ತು ಆತ್ಮಕಥೆಗಳಿವೆ. ಅವುಗಳನ್ನು ಒಟ್ಟಾಗಿ ಓದಿದಾಗ ನಡೆದ ಸಂಗತಿಗಳ ಹಲವು ಆಯಾಮಗಳು ನಮಗೆ ಕಾಣಿಸುತ್ತವೆ. ನಡೆದ ಘಟನೆಗಳಿಂದ ದೂರ ನಿಂತು ನೋಡುವುದರಿಂದ ಅದು ಭಾವಾವೇಶದಿಂದ ದೂರವಾಗಿ ವಸ್ತುನಿಷ್ಠವಾಗಿ ನೋಡಲೂ ಸಾಧ್ಯವಾಗುತ್ತದೆ. ಈ ರೀತಿಯ ಸಾಹಿತ್ಯ ಸ್ವಾಗತಯೋಗ್ಯ. ಹೆಚ್ಚು ಜನ ಸಮಕಾಲೀನ ಚರಿತ್ರೆ ಬರೆಯುತ್ತಿರುವುದು ನಮ್ಮ ಸಂದರ್ಭದಲ್ಲಿ ಸೂಕ್ತವೂ ಅಪೇಕ್ಷಣೀಯವೂ ಆಗಿದೆ.

ಸ್ವಾತಂತ್ರ್ಯಾ ನಂತರ ಭಾರತಕ್ಕೆ ಸಿಕ್ಕ ವಿತ್ತ ಮಂತ್ರಿಗಳ ಬಗೆಗಿನ ಪುಸ್ತಕ ಮಾಲಿಕೆಯನ್ನು ಎ.ಕೆ. ಭಟ್ಟಾಚಾರ್ಯ ಬರೆಯುತ್ತಿದ್ದಾರೆ. ಆ ಮಾಲಿಕೆಯ ಮೊದಲ ಸಂಪುಟ 'ಇಂಡಿಯಾಸ್ ಫೈನಾನ್ಸ್ ಮಿನಿಸ್ಟರ್ಸ್ – ಫ್ರಮ್ ಇಂಡಿಪೆಂಡೆಂಸ್ ಟು ಎಮರ್ಜೆನ್ಸಿ' (1947–1977) ಈಚೆಗೆ ಪ್ರಕಟಗೊಂಡಿದೆ. ಇನ್ನೂ ಎರಡು ಸಂಪುಟಗಳನ್ನು ಪ್ರಕಟಿಸುವುದಾಗಿ ಭಟ್ಟಾಚಾರ್ಯ ಹೇಳಿದ್ದಾರೆ. ಭಟ್ಟಾಚಾರ್ಯ ಅರ್ಥಿಕ ಪತ್ರಿಕೆಗಳಲ್ಲಿ ಕೆಲಸ ಮಾಡಿ ಈಗ 'ಬಿಜಿನೆಸ್ ಸ್ಟಾಂಡರ್ಡ್' ಪತ್ರಿಕೆಯ ಸಂಪಾದಕೀಯ ನಿರ್ದೇಶಕರಾಗಿದ್ದಾರೆ. ಅವರು ಸಮರ್ಥರು. ವಿಚಾರಧಾರೆಯ ಕಟ್ಟಿಗೆ ಬಲಿಯಾಗದೇ ವಸ್ತುನಿಷ್ಠವಾಗಿ ಬರೆಯುವ ಅವರ ಶೈಲಿಯಿಂದ ನಮ್ಮ ಬೆಳವಣಿಗೆಯ ಪಥವನ್ನು ನಾವು ಅರಿಯಲು ಸಾಧ್ಯವಾಗುತ್ತದೆ. ಇದೇ ರೀತಿ ರಿಜರ್ವ್ ಬ್ಯಾಂಕಿನ ಗವರ್ನರುಗಳ ಬಗ್ಗೆಯೂ ಪುಸ್ತಕಗಳು ಬಂದಿವೆ. ಜೊತೆಗೆ ಆರ್ಥಿಕ ರಂಗದಲ್ಲಿ – ಸರ್ಕಾರದೊಂದಿಗೆ ಕೆಲಸ ಮಾಡಿದ ಅನೇಕರ